

# ಟ್ರಂಕು

ಟ್ರಂಕಿನ ಕುರಿತ ಈ ಬರವಣಿಗೆಗೆ ನನ್ನ ಮನಸ್ಸೆಂಬ ಟ್ರಂಕಿನಲ್ಲಿ ಹೊರಹಾಕಲಾಗದಂತೆ ಸೇರಿಕೊಂಡ ಕೆಲವು ಕಥೆಗಳೇ ಕಾರಣ. ಆ ಕಥೆಗಳಲ್ಲಿ ಮೊದಲನೆಯದು 'ಕಾಸಿನ ಸರ'ದ್ದು. ಅಮ್ಮ ಯಾವಾಗಲೋ ಹೇಳಿದ ತುಣುಕುಗಳೆಲ್ಲ ಕೂಡಿಕೊಂಡು ರೂಪುಗೊಂಡಿರುವ ಕಥೆಯಿದು.

"ಅಮ್ಮನಿಗೆ ಮದುವೆಯಾದ ಹೊಸತು. ಊರಿನಿಂದ ಅಪ್ಪ ಬಂದಿದ್ದಾರೆ. ರಾತ್ರಿಗೆ ಉಳಿಯುವಷ್ಟು ಅವರಿಗೆ ಬಿಡುವಿಲ್ಲ. ಈ ದಿನವೇ ಊರಿಗೆ ಹೋಗಬೇಕೆಂದು ತುದಿಗಾಲಲ್ಲಿ ನಿಂತಿದ್ದಾರೆ. ಅಪ್ಪ ಬೇಗ ಹೊರಡಬಾರದೇ ಎಂದು ಮಗಳೂ ಕಾಯುತ್ತಿದ್ದಾಳೆ. ಅವಳಿಗೊಂದೇ ಭಯ – ಅಪ್ಪ ಇರುವಾಗಲೇ ಅವರು ಬಂದರೇನು ಗತಿ? 'ಇವತ್ತು ಬೆಳಗ್ಗೆಯಷ್ಟೇ ಹೊರಟರು. ಇವತ್ತು ಬರೋದಿಲ್ಲ. ನಾಳೆಯೂ ಅನುಮಾನ. ಬರೋದು ಎರಡು ಮೂರು ದಿನವಾಗುತ್ತದಂತೆ' ಎಂದು ತನ್ನ ಗಂಡನ ಕುರಿತು ಅಪ್ಪನಿಗೆ ಸುಳ್ಳು ಹೇಳಿದ್ದಳು. 'ಏನು ಕೆಲಸ' ಎಂದು ಕೇಳಿದ ಅಪ್ಪನಿಗೆ, 'ಗಂಡಸರಿಗೆ ನೂರೆಂಟು ಕೆಲಸ. ಅಮ್ಮನ ಹತ್ತಿರ ನೀವು ಎಲ್ಲವನ್ನೂ ಹೇಳ್ತೀರೇನು' ಎಂದು ದಬಾಯಿಸಿದ್ದಳು. ಮಗಳ ಸುಳ್ಳನ್ನು ನಂಬಿಯೇ ಅಪ್ಪ ಮರುಪ್ರಯಾಣ ಬೆಳೆಸಿದ್ದರು. 'ರಾತ್ರಿ ಉಳಿದು ಬೆಳಗ್ಗೆ ಹೋಗಿ' ಎಂದು ಮಗಳು ಬಾಯಿಮಾತಿಗೂ ಹೇಳದಿರುವುದು ಅವರ ಗಮನಕ್ಕೂ ಬಂದಿತ್ತು.

ಅಪ್ಪ ಬಂದಾಗಲೇ ಆಕೆಗೆ ಅನುಮಾನವಾಗಿತ್ತು.